Survey of Minerals in North Kanara District.

*Q.—179. Sri S. P. PHAYADE (Ankola).—

Will the Govenment be pleased to state :—

(*a*) whether any survey of minerals in North Kanara Distict has been conducted at any time, and if so, who has made the survey ;

(*b*) which are the important minerals that are available there and whether the Government propose to exploit the same ?

A.—Sri K MALLAPPA (Minister for Industries and Commerce).—

(*a*) Mineral survey in selected parts of North Kanara District has been conducted by the Department of Mines and Geology.

(*b*) Iron ore, manganese ore, limestone, kaolin and titaniferous iron ore are the important minerals found to be available in North Kanara District.

Manganese and iron ores near Bisgod, Yellapur Taluk and iron ore near Absarkonda, Honnavar Taluk, are being exploited by the Board of Mineral Development.

ಶ್ರೀ ಎಸ್. ಪಿ. ಫಾಯಿದೆ.—ನನ್ನ (ಎ) ಪ್ರಶ್ನೆಗೆ ಉತ್ತರವಾಗಿ ಸಂಬಂಧಪಟ್ಟ ಇಲಾಖೆಯವರು ನನ್ನ ಜಿಲ್ಲೆಯಲ್ಲಿ ಖನಿಜಗಳ ಬಗ್ಗೆ ಸರ್ವೆ ಕಾರ್ಯವನ್ನು ನಡೆಸಿದ್ದಾರೆ ಎಂಬುದಾಗಿ ಹೇಳಿದ್ದಾರೆ. ಎಲ್ಲೋ ಕೆಲವು ಪ್ರದೇಶಗಳಲ್ಲಿ ಖನಿಜಗಳನ್ನು ತೆಗೆದಿರುವುದರಿಂದ ಪೂರ್ತಿ ಜಿಲ್ಲೆಯನ್ನು ಸರ್ವೆ ಮಾಡುವ ವಿಚಾರ ಸರ್ಕಾರಕ್ಕಿಲ್ಲವೇ ?

†ಶ್ರೀ ಕೆ. ಮಲ್ಲಪ್ಪ.—ಈಗ ಆ ಜಿಲ್ಲೆಯ ಕೆಲವು ಪ್ರದೇಶಗಳಲ್ಲಿ ಆ ಖನಿಜವೇನೋ ಸಿಕ್ಕುತ್ತದೆ. ಅದನ್ನು ತೆಗೆಯುತ್ತಿದ್ದಾರೆ. ಹೀಗೆಯೇ ಕ್ರಮೇಣವಾಗಿ ಅದರ ಎಕ್ಸ್‌ಪ್ಲಾಯಟೇಷನ್ ಜಿಲ್ಲೆಯನ್ನೆಲ್ಲಾ ಆವರಿಸಿಕೊಳ್ಳಬಹುದು.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಒಂದು ಕಡೆಯಲ್ಲಿ ಸರ್ವಕಾರ್ಯ ನಡೆಯುತ್ತಿದೆ ಎಂದು ಹೇಳುತ್ತಾರೆ. ಇನ್ನೊಂದು ಕಡೆಯಲ್ಲಿ ಇನ್ನೂ ಅಂದಾಜುಗಳೇ ತಯಾರಾಗಿಲ್ಲವೆಂದು ಹೇಳುತ್ತಾರೆ ? ಇದರಲ್ಲಿ ಯಾವುದು ಸರಿ.

ಶ್ರೀ ಕೆ. ಮಲ್ಲಪ್ಪ.—ಉತ್ತರ ಕನ್ನಡ ಜಿಲ್ಲೆಯಲ್ಲಿ ಕಬ್ಬಿಣದ ಅದುರು ಸಾಕಷ್ಟು ಪ್ರಮಾಣದಲ್ಲಿ ದೊರೆಯುತ್ತದೆಂದು ಉತ್ತರದಲ್ಲಿ ಈಗಾಗಲೇ ಹೇಳಿದೆ. ಇನ್ನು ಕೆಲವು ಪ್ರದೇಶಗಳಲ್ಲಿ ಒಳ್ಳೆಯ ಮ್ಯಾಂಗನೀಸ್ ಸಿಕ್ಕುತ್ತದೆಂದು ವರದಿ ಬಂದಿರುವುದರಿಂದ ಗಣಿ ಮತ್ತು ಭೂ ವಿಜ್ಞಾನ ಇಲಾಖೆಯವರು ಆ ಖನಿಜಗಳ ಬಗ್ಗೆ ಸರ್ವೆಕಾರ್ಯ ನಡೆಸಿದ್ದಾರೆ.

Sri C. J. MUCKANNAPPA.—You have said in answer to (b) that iron ore, manganese ore, limestone, kaolin and titaniferous iron ore are the important minerals found to be available in North Kanara District. What is the quantity of the four or five minerals which are available there ?

ಶ್ರೀ ಕೆ. ಮಲ್ಲಪ್ಪ.—ಆ ಪ್ರಶ್ನೆಗೆ ಮೊದಲೇ ಉತ್ತರ ಕೊಟ್ಟಿದ್ದೇನೆ.

ಶ್ರೀ ಸಿ. ಆರ್. ರಂಗೇಗೌಡ.—(ಬಿ) ಗೆ ಉತ್ತರವಾಗಿ ಹೇಳಿರುವಂತೆ ಬಿನ್ನೋಡಿನ ಬಳಿ ಮ್ಯಾಂಗನೀಸ್ ಮತ್ತು ಕಬ್ಬಿಣದ ಅದುರು ಕೇಕಡ 35 ರಿಂದ 40 ರಷ್ಟು ಸಿಕ್ಕುತ್ತಿದೆಯಷ್ಟೇ. ಅದು, ಬಂದರಿಗೆ ದೂರವಾಗಿದೆ. ಆದರೆ ಅಪ್ಪರಕೊಂಡದ ಬಳಿ ಕಬ್ಬಿಣದ ಅದುರು ಶೇಕಡ 55 ರಿಂದ 60 ರಷ್ಟು ಸಿಕ್ಕುವುದಲ್ಲದೆ ಅದು ಬಂದರಿಗೆ ಬಹಳ ಹತ್ತಿರವಾಗಿದೆ. ಈಗ ಈ ಖನಿಜಗಳ ಉತ್ಪತ್ತಿ ಜಾಸ್ತಿಯಾಗಿದೆಯೆಂದು ಮೈನರಲ್ ಡಿಪಾರ್ಟ್‌ಮೆಂಟಿನವರು ಹೇಳುತ್ತಿರುವಾಗ ಅದನ್ನು ವಿಶೇಷವಾಗಿ ರಫ್ತು ಮಾಡುವುದಕ್ಕಾಗುತ್ತದೆಯೇ ?

ಶ್ರೀ ಕೆ. ಮಲ್ಲಪ್ಪ.—ಆ ವಿಷಯದಲ್ಲಿ ಬೇಕಾದಷ್ಟು ಸಲಕರಣೆಗಳನ್ನು ಮತ್ತು ಸಿದ್ಧತೆಗಳನ್ನು ಈಗಾಗಲೇ ಮಾಡಿದ್ದೇವೆ. ಮ್ಯಾಂಗನೀಸ್ ಅದುರು ಮಾನ್ಯ ಸದಸ್ಯರು ಹೇಳಿದಷ್ಟು ದೂರದಲ್ಲಿ ಸಿಕ್ಕುತ್ತದೆಂಬುದನ್ನು ಖಂಡಿತವಾಗಿ ಒಪ್ಪಿಕೊಳ್ಳುವುದಕ್ಕಾಗುವುದಿಲ್ಲ. ಇನ್ನೊಂದು ಬಹಳ ಹತ್ತಿರದಲ್ಲಿ ದೊರಕುತ್ತದೆಂದು ಹೇಳಿರತಕ್ಕದ್ದು ತಪ್ಪಾಗಲಾರದು. ಯಾವುದೇ ಆಗಲೀ ಅದು ಎಷ್ಟು ಪ್ರಮಾಣದಲ್ಲಿ ಸಿಕ್ಕುತ್ತದೆಂಬುದನ್ನು ಮೊದಲು ನೋಡಬೇಕು. ಒಂದು ವೇಳೆ ಸಾಕಷ್ಟು ಪ್ರಮಾಣದಲ್ಲಿ ದೊರೆಯದೆ ಹೋದರೆ ಮಾಡಿದಂಥ ಕೆಲಸ ವ್ಯರ್ಥವಾಗುತ್ತದೆ. ಆ ಬಗ್ಗೆ ಈಗಾಗಲೇ ತನಿಖೆ ಯಾಗುತ್ತಿದೆ. ಕಬ್ಬಿಣದ ಅದುರಿಗೆ ಬೇಕಾದಷ್ಟು ಡಿಮ್ಯಾಂಡ್ ಇದೆ. ಆ ಡಿಮ್ಯಾಂಡನ್ನು ಪೂರೈಸದ ಹೊರತು ಏನು ಮಾಡುವುದಕ್ಕೂ ಆಗುವುದಿಲ್ಲ. ಹತ್ತಿರ ಪ್ರದೇಶದಲ್ಲಿ ಯಾವ ಪ್ರಮಾಣದಲ್ಲಿ ಯಾವ ಕ್ವಾಲಿಟಿ ಮತ್ತು ಮಿಶ್ರ ವನ್ನುಗಳು ಸಿಕ್ಕುತ್ತವೆಂಬುದನ್ನು ತನಿಖೆ ಮಾಡಿ ಒಳ್ಳೆಯ ಕ್ವಾಲಿಟಿ ಸಿಕ್ಕಿದರೆ ಅದನ್ನು ತೆಗೆದುಕೊಳ್ಳಬಹುದು ಸದ್ಯದಲ್ಲಿ ಮ್ಯಾಂಗನೀಸ್‌ಗೆ ಇರತಕ್ಕ ಡಿಮ್ಯಾಂಡ್ ಬಹಳ ಕಡಮೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಅಲ್ಲಿ ಮ್ಯಾಂಗನೀಸ್ ಅದುರು, ಮತ್ತು ಕಬ್ಬಿಣದ ಅದುರು ಹೇರಳವಾಗಿರುವುದರಿಂದ ಅಲ್ಲಿ ಸರ್ಕಾರದವರು ಒಂದು ಕಬ್ಬಿಣದ ಕಾರ್ಖಾನೆಯನ್ನು ಪ್ರಾರಂಭ ಮಾಡುವುದಕ್ಕೆ ಯೋಚನೆ ಮಾಡುತ್ತಾರೆಯೇ ?

ಅಧ್ಯಕ್ಷರು.—ಕಾರ್ಖಾನೆಗೆ ಬೇಕಾಗುವಷ್ಟು ಅದುರು ಅಲ್ಲಿ ಇಲ್ಲ.

ಶ್ರೀ ಕೆ. ಮಲ್ಲಪ್ಪ.—ಅಪ್ಪರ ಕೊಂಡದ ಹತ್ತಿರ ಸಿಕ್ಕತಕ್ಕಂಥ ಕಬ್ಬಿಣದ ಅದುರು ಏನಿದೆಯೋ ಅದು ಬಹಳ ಕಡಮೆ ದರ್ಜೆಯ ಅದುರು. ಅದು ತೀರ ಪ್ರದೇಶದ ಹತ್ತಿರ ಇರುವುದರಿಂದ ಅದು ಪರದೇಶಕ್ಕೆ ಸಾಗಿಸುವುದಕ್ಕೆ ಅನುಕೂಲವಾದಂತಹ ಅದುರೇ ಏನಾ ಕಬ್ಬಿಣ ಕಾರ್ಖಾನೆಯನ್ನು ತೆರೆಯುವುದಕ್ಕೆ ಲಾಯಕ್ಕಾದ ಅದುರು ಅಲ್ಲ.

ಶ್ರೀ ಎಸ್. ಪಿ. ಘಾಯದೆ.—ಕಾರವಾರ ಡಿಸ್ಟ್ರಿಕ್ಟಿನಲ್ಲಿ ನಾನಾ ವಿಧವಾದ ಖನಿಜಗಳು ಸಿಕ್ಕುತ್ತಾ ಇರುವುದರಿಂದ ಅದನ್ನು ಉಪಯೋಗ ಮಾಡಿಕೊಂಡು ಯಾವುದಾದರೂ ಒಂದು ಕೈಗಾರಿಕೆ ತೆರೆಯುವುದಕ್ಕೆ ಪ್ರಯತ್ನ ಮಾಡುತ್ತೀರಾ ?

ಶ್ರೀ ಕೆ. ಮಲ್ಲಪ್ಪ.—ಕಾರವಾರದಲ್ಲಿ ಒಂದು ಅಲ್ಯೂಮಿನಿಯಮ್ ಕೈಗಾರಿಕೆಯನ್ನು ತೆರೆಯುವುದಕ್ಕೆ ಏರ್ಪಾಡು ಮಾಡುತ್ತಿದ್ದೇವೆ.

Laying of a Railway line *via* Kadur-Chickmagalur-Mudigere-Sakaleshpura to link Hassan-Mangalore Railway.

*Q.—190. Smt. B. L. SUBBAMMA (Chickmagalur).—

Will the Government be pleased to state :—

(*a*) whether they have received any representation requesting to lay a Railway line *via* Kadur-Chickmagalur-Mudigere-Sakleshpura so as to link Hassan-Mangalore Railway line ;

(*b*) the steps taken by them in this behalf ?

A.—Sri G. B. SHANKAR RAO (Parliamentary Secretary to the Minister for Public Works).—

(*a*) Yes.

(*b*) It is proposed to consider this matter after the work on the Mangalore-Hassan Railway line starts.

ಶ್ರೀಮತಿ ಬಿ. ಎಲ್. ಸುಬ್ಬಮ್ಮ.—ಹಾಸನ-ಮಂಗಳೂರು ರೈಲು ಮಾರ್ಗಕ್ಕೆ ಸೇರಿಸುವಂತೆ ಕಡೂರು-ಮೂಡಿಗೆರೆ-ಸಕಲೇಶಪುರ ಮಾರ್ಗವಾಗಿ ರೈಲು ಮಾರ್ಗವೊಂದನ್ನು ಏರ್ಪಡಿಸಬೇಕೆಂದು ಕೋರಿ ಮನವಿಯೇನಾದರೂ ಸರ್ಕಾರಕ್ಕೆ ಬಂದಿದೆಯೇ ಎಂದು ಕೇಳಿದ್ದಕ್ಕೆ ಬಂದಿದೆ ಎಂದು ಹೇಳಿದ್ದೀರಿ, ಅಂಥಾ ಮನವಿಗಳು ಸರ್ಕಾರಕ್ಕೆ ಎಷ್ಟು ವರ್ಷಗಳಿಂದ ಬರುತ್ತಿವೆ ? ಈ ಬಗ್ಗೆ ಸರ್ಕಾರ ದವರು ಏನಾದರೂ ಕ್ರಮವನ್ನು ಕೈಗೊಂಡಿದ್ದಾರೆಯೇ ?